



ಕನ್ನಡವೆಂದರೆ ಬರಿ ನುಡಿಯಲ್ಲ, ಹಿರಿದಿದೆ ಅದರರ್ಥ, ಅದು ಜೀವನದರ್ಥ ಎಂಬ ಆದರ್ಶಗಳೊಂದಿಗೆ ಕನ್ನಡ ಕುಲಕೋಟಿಯ ಹಿತಕ್ಕಾಗಿ ನಮ್ಮ ಸರ್ಕಾರ ನಾಡು–ನುಡಿಯ ಅಭ್ಯುದಯಕ್ಕಾಗಿ ಅಹರ್ನಿಶಿ ಶ್ರಮಿಸುತ್ತಿದೆ.

ಕನ್ನಡವೆನ್ನುವುದು ನಮಗೆ ಬದುಕು–ಭಾವ ಮಾತ್ರವೇ ಅಲ್ಲ, ಭವ್ಯ ಭವಿತವ್ಯದ ಹೆದ್ದಾರಿ ಕೂಡ. ಕನ್ನಡತನದ ಧೀಮಂತ ಆದರ್ಶವೇ ನಮ್ಮ ಅಭಿವೃದ್ಧಿ ಮಾದರಿಯ ಹಿಂದಿನ ಪ್ರೇರಣೆ. ಕನ್ನಡತನದಲ್ಲಿ ವಿಶ್ವಮಾನವತ್ವವಿದೆ, ಕನ್ನಡ ವಿಶ್ವಮಾನ್ಯವಾಗಿದೆ.

ಕನ್ನಡ ನಮ್ಮ ಅಸ್ಮಿತೆ, ಅನನ್ಯತೆ, ಆದ್ಯತೆ. ಅತ್ಯಂತ ಪಾರದರ್ಶಕ, ಕಲಾವಿದರ ಸ್ನೇಹಿ ಆಡಳಿತ ವ್ಯವಸ್ಥೆಯನ್ನು ರಾಷ್ಟ್ರಮಟ್ಟದಲ್ಲೇ 14 ನೇ ಇಲಾಖೆಯಾಗಿ, ರಾಜ್ಯದ ಮೊದಲ ಇಲಾಖೆಯಾಗಿ ಇ–ಆಡಳಿತಕ್ಕೆ ಒಳಪಟ್ಟ ಹೆಗ್ಗಳಿಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಲ್ಲುತ್ತದೆ.

–ಸಿದ್ದರಾಮಯ್ಯ, ಮುಖ್ಯಮಂತ್ರಿ.

ಕಲಾವಿದರ ಪಾಲಾಗಲಾರಂಭಿಸಿತು.

ಕಲೆಗಾಗಿ ತಮ್ಮ ಜೀವನವನ್ನು ಮುಡಿಪಿಟ್ಟು, ಸೋತು ಸೊರಗಿ ಇಳಿಗಾಲದಲ್ಲಿ ಜೀವನ ನಡೆಸಲು ಕಷ್ಟಪಡುವ ಕಲಾವಿದರಿಗೆ ನೀಡುತ್ತಿದ್ದ ಮಾಸಾಶನವನ್ನು ಏಕಾಏಕಿ ರೂ.1000 ನಿಂದ ರೂ.1500ಗೆ ಹೆಚ್ಚಿಸಲಾಯಿತು. ವರ್ಷಕ್ಕೆ 400 ಕಲಾವಿದರನ್ನು ಮಾತ್ರ ಹೊಸದಾಗಿ ಸೇರ್ಪಡೆ ಮಾಡಲಾಗುತ್ತಿತ್ತು. ಈ ಸಂಖ್ಯೆಯನ್ನು 1000ಕ್ಕೆ ಹೆಚ್ಚಿಸಲಾಯಿತು. ಹೀಗಾಗಿ, ಈಗ 15 ಸಾವಿರ ಕಲಾವಿದರು ಮಾಸಾಶನ ಪಡೆಯುತ್ತಿದ್ದಾರೆ. ಕಲಾವಿದರಿಗೆ ಆಯಾ ತಿಂಗಳೇ ಮಾಸಾಶನ ತಲುಪಬೇಕು ಎಂಬ ಕಾರಣಕ್ಕೆ ರೂ.5 ಕೋಟಿಯನ್ನು ಮೀಸಲಾಗಿಡುವ ಕೆಲಸವನ್ನೂ ಸಿದ್ದರಾಮಯ್ಯ ಮಾಡಿದರು.

ಕಲಾವಿದರನ್ನು ಪ್ರೋತ್ಸಾಹಿಸಲು ಹೊಸ ಉಪಕ್ರಮವನ್ನು ಇಲಾಖೆ ಶುರುಮಾಡಿದೆ. ಯಾವುದಾದರೂ ಸಂಘಸಂಸ್ಥೆಗಳು, ಕಾರ್ಯಕ್ರಮ ನಡೆಸುವವರು ಕಲಾವಿದರ ತಂಡವನ್ನು ಕಳುಹಿಸಲು ಕೋರಿಕೆ ಸಲ್ಲಿಸಿದರೆ ಅದನ್ನು ಒದಗಿಸುವ ಕೆಲಸವನ್ನು ಇಲಾಖೆ ಮಾಡುತ್ತಿದೆ. ದೂರದ ಹಳ್ಳಿಗಾಡಿನಲ್ಲಿರುವ ಕಲಾವಿದರನ್ನು ಮಧ್ಯವರ್ತಿ ಕರೆತಂದು ಕೈಗೊಂದಿಷ್ಟು ಕಾಸು ಕೊಟ್ಟು ಕಳುಹಿಸುವ ಪದ್ಧತಿ ಮೊದಲಿತ್ತು. ಕಲಾವಿದರಿಗೆ ಕೊನೆಗೆ ಉಂಡೆನಾಮವೇ ಗತಿಯಾಗುತ್ತಿತ್ತು. ಒಂದು ತಂಡಕ್ಕೆ ರೂ.20,000 ಶುಲ್ಕ ನಿಗದಿ ಮಾಡಿದರೆ ಅದರಲ್ಲಿ ರೂ.4,000 ತಂಡದ ನಾಯಕನಿಗೆ, ಉಳಿದ ಮೊತ್ತವನ್ನು ಕಲಾವಿದರಿಗೆ ಹಂಚುವ ವ್ಯವಸ್ಥೆ ಮಾಡಲಾಗಿದೆ. ಇದನ್ನು ಬ್ಯಾಂಕ್ ಖಾತೆಗೆ ಜಮೆ ಮಾಡುವುದರಿಂದ ಸಾಂಸ್ಕೃತಿಕ ತಂಡದ ಕಲಾವಿದರಿಗೆ ಆರ್ಥಿಕ ನೆರವು ನೇರವಾಗಿ ಸಿಗಲು ಆರಂಭವಾಗಿದೆ. ಕಲೆ ಮತ್ತು ಕಲಾವಿದರು ಉಳಿಯುವಂತಾಗಿದೆ. ಇದು ಸಂಸ್ಕೃತಿ ಇಲಾಖೆಯ ಹೊಸ ಕಾಯಕ.



## ಪ್ರಶಸ್ತಿಗಳಿಗೆ ಘನತೆ

ರಾಜ್ಯೋತ್ಸವ ಪ್ರಶಸ್ತಿ, ಅಕಾಡೆಮಿಗಳ ಪ್ರಶಸ್ತಿ ಸೇರಿದಂತೆ ಸರ್ಕಾರ ನೀಡುವ ಪ್ರಶಸ್ತಿಗಳಿಗೆ ಬಹಳಷ್ಟು ವರ್ಷ ಮೌಲ್ಯ, ಘನತೆಯನ್ನು ಕಳೆದುಕೊಂಡಿದ್ದವು.

ಪ್ರತಿ ವರ್ಷ ಪ್ರಶಸ್ತಿ ಪ್ರಕಟವಾದ ಬಳಿಕ 'ಅರ್ಹರಿಗೆಲ್ಲ ಮುಂದಿನ ಬಾರಿ' ಎಂಬ ಟೀಕೆಯೊಂದು ಸಾಮಾನ್ಯವಾಗಿ ತೇಲಿಬರುತ್ತಿತ್ತು. ವಶೀಲಿ ಬಾಜಿ, ಲಾಬಿಗಳಿಗೆ ಮಣಿದು ಪ್ರಶಸ್ತಿ ನೀಡಲಾಗುತ್ತಿದೆ, ಪ್ರಶಸ್ತಿ ಪಡೆದವರಿಗಿಂತ ಅದನ್ನು ಪಡೆಯದವರಿಗೆ ಹೆಚ್ಚು ಗೌರವ ಎಂಬ ಮಾತುಗಳು ಚಾಲ್ತಿಯಲ್ಲಿತ್ತು. ಸಿದ್ದರಾಮಯ್ಯ ಅಧಿಕಾರಕ್ಕೆ ಬರುತ್ತಿದ್ದಂತೆ ಪ್ರಶಸ್ತಿಗಳಿಗೆ ಘನತೆ ತರಲು ಮುಂದಾದರು.

ನೂರು ಇನ್ನೂರು ಜನರಿಗೆ ನೀಡುತ್ತಿದ್ದ ರಾಜ್ಯೋತ್ಸವ ಪ್ರಶಸ್ತಿಯ ಸಂಖ್ಯೆಯನ್ನು ರಾಜ್ಯೋತ್ಸವದ ವರ್ಷಾಚರಣೆಯ ಸಂಖ್ಯೆಗೆ ಸೀಮಿತ ಗೊಳಿಸಿದರು. 58ನೇ ರಾಜ್ಯೋತ್ಸವದಲ್ಲಿ 58 ಜನರಿಗೆ, 62ನೇ ರಾಜ್ಯೋತ್ಸವದಲ್ಲಿ 62 ಜನರಿಗೆ ಪ್ರಶಸ್ತಿ ನೀಡುವ ಪರಿಪಾಠ ಆರಂಭಿಸಿದರು. ಆಯಾ ಕ್ಷೇತ್ರದ ಸಾಧನೆಯ ಹಿರಿತನವೇ ಮಾನದಂಡವಾಗಬೇಕು ಎಂಬ ಕಾರಣಕ್ಕೆ ಕ್ರೀಡಾ ಕ್ಷೇತ್ರವೊಂದನ್ನು ಬಿಟ್ಟು ಉಳಿದೆಲ್ಲಾ ಕ್ಷೇತ್ರಗಳಲ್ಲಿ 60 ವರ್ಷ ಮೀರಿದವರಿಗೆ ಮಾತ್ರ ಪ್ರಶಸ್ತಿ ಎಂದು ಮಾನದಂಡ ನಿಗದಿಪಡಿಸಲಾಯಿತು.

ಪ್ರಶಸ್ತಿಗೆ ಅರ್ಹರನ್ನು ಆಯ್ಕೆ ಮಾಡುವ ಸಮಿತಿ ಶಿಫಾರಸು ಮಾಡಿದ ಹೆಸರನ್ನಷ್ಟೇ ಮುಖ್ಯಮಂತ್ರಿಗಳ ಅಧ್ಯಕ್ಷತೆಯ ಸಮಿತಿ ಅನುಮೋದಿಸುವ ಪರಿಪಾಠವನ್ನು ರೂಢಿಸಲಾಯಿತು. ಇದರಿಂದಾಗಿ ಪ್ರಶಸ್ತಿ ಆಯ್ಕೆ ಪಾರದರ್ಶಕವಾಗಿ ನಡೆಯಲು ಆರಂಭವಾಯಿತು.

ಸರ್ಕಾರದಿಂದ ಜೀವಮಾನದ ಸಾಧನೆಯಾಗಿ ನೀಡುವ ಪ್ರಶಸ್ತಿಯ ಆಯ್ಕೆಯೂ ಸರ್ಕಾರದ ಮರ್ಜಿಯಲ್ಲೇ ನಡೆಯುತ್ತಿತ್ತು. ಆಯಾ ಕ್ಷೇತ್ರದಲ್ಲಿ ಪರಿಣತಿ ಪಡೆದವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ, ಅರ್ಹರನ್ನು ಆಯ್ಕೆ ಮಾಡುವ ಪದ್ಧತಿಗೆ ಚಾಲನೆ ನೀಡಲಾಯಿತು. ಒಂದೊಂದು ಪ್ರಶಸ್ತಿಗೆ ಒಂದೊಂದು ರೀತಿಯಲ್ಲಿ ನಗದು ಪುರಸ್ಕಾರ ನೀಡಲಾಗುತ್ತಿತ್ತು. ಸರ್ಕಾರ ನೀಡುವ ರಾಷ್ಟ್ರೀಯ ಪ್ರಶಸ್ತಿಗಳಾದ ಮಹಾವೀರ, ಪಿಟೀಲು ಚೌಡಯ್ಯ, ಬಸವ ಪ್ರಶಸ್ತಿ ಮೊತ್ತವನ್ನು ರೂ.10 ಲಕ್ಷಕ್ಕೆ, ಜೀವಮಾನ ಸಾಧನೆಗಾಗಿ ನೀಡುವ 13 ಪ್ರಶಸ್ತಿಗಳ ಮೊತ್ತವನ್ನು ತಲಾ ರೂ.5 ಲಕ್ಷಕ್ಕೆ ಹೆಚ್ಚಿಸಿ ಏಕರೂಪತೆ ತರಲಾಯಿತು. ■